# ಪ್ರಧಾನ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ ನ್ಯಾಯಾಲಯ, ಹೊನ್ನಾಳಿ

## ಸಿ.ಸಿ.506/2018

ಸಾಕ್ಷಿದಾರರ ಹೇಳಿಕೆಃ

| | | |
|---|---|---|
| **ಹೆಸರು** | ಒ. ಜಿ. ಏಕಾಂತಪ್ಪ | ಚಾಸಾಃ **21** ಪ್ರಾಸಾಃ **7** |
| **ತಂದೆಯ ಹೆಸರು** | ಒ ಗಂಗಣ್ಣ | |
| **ವಯಸ್ಸು** | 62 ವರ್ಷ | |
| **ವೃತ್ತಿ** | ನಿವೃತ್ತ ಎ ಎಸ್ ಐ | |
| **ವಾಸಸ್ಥಳ** | ದಾವಣಗೆರೆ | |

ದಿನಾಂಕಃ **22-01-2026** ರಂದು ಸಾಕ್ಷಿಯನ್ನು ಕರೆದು ಪ್ರಮಾಣವಚನ ಬೋಧಿಸಲಾಯಿತು.

ಮುಖ್ಯ ವಿಚಾರಣೆ :-ಮಾನ್ಯ ಸ.ಸ.ಅ. ರವರಿಂದ:-

ನಾನು 2014 ರಿಂದ 2020 ರವರೆಗೆ ಹೊನ್ನಾಳಿ ಪೊಲೀಸ್ ಠಾಣೆಯಲ್ಲಿ ಹೆಚ್ ಸಿ ಮತ್ತು ಎ ಎಸ್ ಐ ಆಗಿ ಕರ್ತವ್ಯ ನಿರ್ವಹಿಸಿದ್ದೇನು.

ದಿಃ 29-08-2017 ರಂದು ಮದ್ಯಾಹ್ನ 12-00 ಗಂಟೆ ಸಮಯದಲ್ಲಿ ದಾವಣಗೆರೆ ಸಿ ಜೆ ಆಸ್ಪತ್ರೆ ಚಾಸಾ-23 ರವರ ಮೌಖಿಕ ಆದೇಶದ ಮೇರೆಗೆ ಭೇಟಿ ನೀಡಿ ಚಾಸಾ-1 ರವರು ನೀಡಿದ ಲಿಖಿತ ದೂರನ್ನು ಸ್ವೀಕರಿಸಿ ಚಾಸಾ-19 ರವರ ಮುಖಾಂತರ ಠಾಣೆಗೆ ಪ್ರಕರಣವನ್ನು ದಾಖಲಿಸಲು ಕಳುಹಿಸಿಕೊಟ್ಟಿದ್ದು ತದನಂತರ ಅಪಘಾತದಲ್ಲಿ ಮೃತಪಟ್ಟ ಸಿದ್ದಲಿಂಗಯ್ಯರವರ ಶವಪಂಚನಾಮೆಯನ್ನು ಜರುಗಿಸಲು ಚಾಸಾ-2 ರಿಂದ 4 ರವರಿಗೆ ನೋಟೀಸನ್ನು ಜಾರಿ ಮಾಡಿ ನಂತರ ಚಾಸಾ-2 ರಿಂದ 4 ಮತ್ತು ಮೃತನ ಸಂಬಂಧಿಕರಾದ ಚಾಸಾ-5 ರಿಂದ 8 ರವರ ಸಮಕ್ಷಮ ಶವಪಂಚನಾಮೆಯನ್ನು

ಮದ್ಯಾಹ್ಷ 01-30 ರಿಂದ 03-00 ಗಂಟೆ ಸಮಯದಲ್ಲಿ ಜರುಗಿಸಿ ಛಾಯಾಚಿತ್ರಗಳನ್ನು ತೆಗೆದು ಚಾಸಾ-5 ರಿಂದ 8 ರವರ ಹೇಳಿಕೆಗಳನ್ನು ಪಡೆದುಕೊಂಡಿರುತ್ತೇನೆ ನಂತರ ಮೃತ ಸಿದ್ದಲಿಂಗಯ್ಯನ ಪಿ ಎಂ ವರದಿಯನ್ನು ಮಾಡಲು ಚಾಸಾ-18 ರವರಿಗೆ ಹಸ್ತಾಂತರಿಸಿ ನಂತರ ಚಾಸಾ-20 ರವರನ್ನು ಶವಕಾವಲಿಗಾಗಿ ನೇಮಕ ಮಾಡಿದ್ದು ಮತ್ತು ನಂತರ ಮೃತನ ಪಿಎಂ ವರದಿಯಾದ ನಂತರ ಚಾಸಾ-20 ರವರು ಮೃತ ದೇಹವನ್ನು ಅವರ ರಕ್ತ ಸಂಬಂಧಿಕರಿಗೆ ಹಸ್ತಾಂತರಿಸುತ್ತಾರೆ.

ಅದೇ ದಿನ ಅಪಘಾತವಾದ ಸ್ಥಳಕ್ಕೆ ಭೇಟಿ ನೀಡಿ ಚಾಸಾ-9 ಮತ್ತು 10 ರವರಿಗೆ ನೋಟೀಸನ್ನು ಜಾರಿ ಮಾಡಿ ಚಾಸಾ-13 ರವರು ಸ್ಥಳ ತೋರಿಸಿದ ಮೇರೆಗೆ ಚಾಸಾ-9 ಮತ್ತು 10 ರವರ ಸಮಕ್ಷಮ ಸಂಜೆ 05-00 ರಿಂದ 06-00 ಗಂಟೆ ಸಮಯದಲ್ಲ ಮಹಜರ್ ಕ್ರಮ ಜರುಗಿಸಿ, ಕಚ್ಚ ನಕಾಶೆಯನ್ನು ತಯಾರಿಸಿ ಛಾಯಾಚಿತ್ರಗಳನ್ನು ತೆಗೆದಿರುತ್ತೇನೆ. ಚಾಸಾ-10, 14 ಮತ್ತು 15 ರವರ ಹೇಳಿಕೆಗಳನ್ನು ಪಡೆದುಕೊಂಡಿರುತ್ತೇನೆ. ನಂತರ ಕಡತವನ್ನು ಮುಂದಿನ ತನಿಖೆಗಾಗಿ ಚಾಸಾ-23 ರವರಿಗೆ ಹಸ್ತಾಂತರಿಸಿರುತ್ತೇನೆ.

ಸ್ಥಳ ಪಂಚನಾಮೆಯನ್ನು ನಿಪಿ-21 ಎಂದು , ಸಾಕ್ಷಿಯ ಸಹಿಯನ್ನು ನಿಪಿ-21(ಎ) ಎಂದು, ಸ್ಥಳ ಮಹಜರ್ ಸಮಯದಲ್ಲಿ ತೆಗೆದ 2 ಛಾಯಾಚಿತ್ರಗಳನ್ನು ನಿಪಿ-22 ಮತ್ತು 23 ಎಂದು, ಶವ ಪಂಚನಾಮೆಯ ಸಮಯದಲ್ಲಿ ತೆಗೆದ ಮೃತನ 2 ಛಾಯಾಚಿತ್ರಗಳನ್ನು ನಿಪಿ-24 ಮತ್ತು 25 ಎಂದು, ಚಾಸಾ-14 ರವರು ಬರೆದುಕೊಟ್ಟ ಮುಚ್ಚಳಿಕೆ ಪತ್ರವನ್ನು ನಿಪಿ-26 ಎಂದು , ಸಾಕ್ಷಿಯ ಸಹಿಯನ್ನು ನಿಪಿ-26(ಎ) ಎಂದು,ಚಾಸಾ-13 ರವರು ಬರೆದುಕೊಟ್ಟ ಮುಚ್ಚಳಿಕೆ ಪತ್ರವನ್ನು ನಿಪಿ-27 ಎಂದು , ಸಾಕ್ಷಿಯ ಸಹಿಯನ್ನು ನಿಪಿ-27(ಎ) ಎಂದು,ಚಾಸಾ-15 ರವರು ಬರೆದುಕೊಟ್ಟ ಮುಚ್ಚಳಿಕೆ ಪತ್ರವನ್ನು ನಿಪಿ-28 ಎಂದು, ಸಾಕ್ಷಿಯ ಸಹಿಯನ್ನು ನಿಪಿ-28(ಎ) ಎಂದು, ಶವ ಪಂಚನಾಮೆಯನ್ನು ಈಗಾಗಲೇ ನಿಪಿ-2 ಎಂದು ಗುರುತಿಸಿದ್ದು ಸಾಕ್ಷಿಯ 2 ಸಹಿಗಳನ್ನು ನಿಪಿ-2(ಸಿ) ಮತ್ತು (ಡಿ) ಎಂದು, ನಿಪಿ-3 ಛಾಯಾಚಿತ್ರವನ್ನು ಸಾಕ್ಷಿ ನೋಡಿ ಗುರುತಿಸಿರುತ್ತಾರೆ. ಶವಪಂಚನಾಮೆಯ ಸಮಯದಲ್ಲಿ ತೆಗೆದ 1 ಛಾಯಾಚಿತ್ರವನ್ನು ನಿಪಿ-29 ಎಂದು, ಕಚ್ಚ ನಕಾಶೆಯನ್ನು ನಿಪಿ-30 ಎಂದು , ಸಾಕ್ಷಿಯ ಸಹಿಯನ್ನು ನಿಪಿ-30(ಎ) ಎಂದು ಗುರುತಿಸಲಾಯಿತು.

<u>ಪಾಟೀ ಸವಾಲು:- ಆರೋಪಿ ಪರ ವಕೀಲರರಿಂದ:-</u>

ಚಾಸಾ-1 ರವರು ನನಗೆ ದೂರನ್ನು ದಾವಣಗೆರೆ ಸಿ ಜೆ ಆಸ್ಪತ್ರೆಯ ಶವಗಾರದ ಹತ್ತಿರ ಕೊಟ್ಟಿದ್ದರು. ನಿಪಿ-2 ಶವತನಿಖಾ ವರದಿಯನ್ನು ನಾನೇ ತಯಾರಿಸಿದ್ದೇನೆ ಎಂದರೆ ಸರಿ. ನಿಪಿ-2 ಶವಪಂಚನಾಮೆಯ ಕಾಲದಲ್ಲಿ ಮೃತ ಸಿದ್ದಲಿಂಗಯ್ಯ ಬೈಕನ್ನು ಅತೀವೇಗ ಮತ್ತು ಅಜಾಗರೂಕತೆಯಿಂದ ತಾನೇ ಚಾಲನೆ ಮಾಡಿಕೊಂಡು ಬಂದು ನಿಯಂತ್ರಣ ತಪ್ಪಿ ಸ್ಕಿಡ್ ಆಗಿ ತಾನೇ ಬೈಕ್ ಸಮೇತ ಕೆಳಗೆ ಬಿದಿದ್ದರಿಂದ ಬಾಯಿ ತುಟಿಗಳಿಗೆ ಪೆಟ್ಟು ಬಿದ್ದು ರಕ್ತ ಗಾಯಗಳಾಗಿ ಹಲ್ಲುಗಳು ಮುರಿದಿದ್ದು ಬಲಕುತ್ತಿಗೆಯಿಂದ ಎದೆಯವರೆಗೆ ತರಚಿದ ಗಾಯಗಳಾಗಿ ಬಲತೋಳು ಭುಜಕ್ಕೆ ಹಾಗೂ ಬಲಗಾಲಿಗೆ ಒಳಪೆಟ್ಟು ಬಿದ್ದು ಆಂಬುಲೆನ್ಸ್ ನಲ್ಲಿ ಚಿಗಟೇರಿ ಆಸ್ಪತ್ರೆಗೆ ಕರೆದುಕೊಂಡು ಹೋಗುವಾಗ ಸುಮಾರು 11-00 ಗಂಟೆ ಸಮಯದಲ್ಲಿ ಮಾರ್ಗ ಮಧ್ಯದಲ್ಲೇ ಮೃತ ಪಟ್ಟಿರುತ್ತಾನೆ ವಿನಃ ಬೇರೆ ಕಾರಣ ಇರುವುದಿಲ್ಲ ಎಂದು ನಮೂದಾಗಿದೆ ಎಂದರೆ ಸರಿ. ನಿಪಿ-2 ರಲ್ಲಿ ಸಾಕ್ಷಿದಾರರಾಗಿ ಸಹಿ ಮಾಡಿದವರು ಮೃತ ಸಿದ್ದಲಿಂಗಯ್ಯನ ಸಂಬಂಧಿಕರು ಎಂದರೆ ಸರಿ. ಈ ಪ್ರಕರಣದಲ್ಲಿ ನಾನು ಮೃತನ ಶವ ಪಂಚನಾಮೆಯನ್ನು ಜರುಗಿಸಲು ಮೇಲಾಧಿಕಾರಿಯವರಿಂದ ಯಾವುದೇ ಲಿಖಿತ ಆದೇಶವನ್ನು ಪಡೆದುಕೊಂಡಿರುವುದಿಲ್ಲ ಆದರ ಮೌಖಿಕ ಆದೇಶದ ಮೇರೆಗೆ ಮಾಡಿರುತ್ತೇನೆ. ನಿಪಿ-21 ಸ್ಥಳ ಪಂಚನಾಮೆಯಲ್ಲಿ ನಮೂದಾಗಿರುವ ವಿಚಾರಗಳನ್ನು ನಾನು ಹೇಳಿದ ಮೇರೆಗೆ ಚಾಸಾ-20 ರವರು ಬರೆದಿರುತ್ತಾರೆ. ಚಾಸಾ-20 ರವರ ಸಹಿಯನ್ನು ನಿಪಿ-21 ಕ್ಕೆ ಪಡೆದುಕೊಂಡಿರುವುದಿಲ್ಲ. ನಿಪಿ-21 ಸ್ಥಳ ಪಂಚನಾಮೆಯಲ್ಲಿ ಲಗೇಜ್ ಆಟೋ ನಂ.ಕೆಎ-17/ಎ-1196 ಮತ್ತು ಕೆಎ-17/ಎ-1966 ಎಂದು ನಮೂದಾಗಿದೆ ಎಂದರೆ ಸರಿ. ಸಾಕ್ಷಿಯು ಮುಂದುವರೆದು ಚಾಸಾ-13 ಪ್ರತ್ಯಕ್ಷ ಸಾಕ್ಷಿದಾರರು ತಮಗೆ ಆಟೋ ನಂಬರ್ ಸರಿಯಾಗಿ ಕಾಣದೇ ಇದುದ್ದರಿಂದ ಮತ್ತು ತಿಳಿಸಿದ ಮೇರೆಗೆ ನಮೂದು ಮಾಡಿದ್ದೇನೆ ಎಂದು ನುಡಿಯುತ್ತಾರೆ. ಸದರಿ ಮೇಲ್ಕಂಡ ವಿಚಾರವನ್ನು ನಿಪಿ-21 ರಲ್ಲಿ ನಮೂದು ಮಾಡಿರುವುದಿಲ್ಲ. ಸದರೆ ಮೇಲ್ಕಂಡ ವಿಚಾರವನ್ನು ನಿಪಿ-21 ರಲ್ಲಿ ನಮೂದು ಮಾಡಲು ನನಗೆ ಯಾವುದೇ ತೊಂದರೆ ಇರುವುದಿಲ್ಲ. ನಿಪಿ-21 ರಲ್ಲಿ ಚಾಸಾ-13 ರವರ ವಿಳಾಸ ನಮೂದಾಗಿಲ್ಲ ಎಂದರೆ ಸರಿ. ನಿಪಿ-21 ರಲ್ಲಿ ಚಾಸಾ-13 ರವರ ಪೂರ್ಣ ವಿಳಾಸವನ್ನು ನಮೂದು ಮಾಡಲು ನನಗೆ ಯಾವುದೇ ತೊಂದರೆ ಇರಲಿಲ್ಲ. ಸಾಕ್ಷಿಗೆ ನಿಪಿ-30 ಕಚ್ಚನಕಾಶೆಯನ್ನು ಎಲ್ಲಿ ತಯಾರಿಸಿದ್ದೀರಿ ಎಂದರೆ ಸಾಕ್ಷಿಯು ಅಪಘಾತವಾದ ಸ್ಥಳ ದಲ್ಲಿ ತಯಾರಿಸಿದ್ದೇನೆ ಎಂದು ನುಡಿಯುತ್ತಾರೆ. ನಿಪಿ-30 ಕಚ್ಚ ನಕಾಶೆಯಲ್ಲಿ ದಿನಾಂಕ ಮತ್ತು ಸಮಯ ನಮೂದು ಮಾಡಿಲ್ಲ ಎಂದರೆ ಸರಿ. ಮಹಜರ್ ಸಮಯದಲ್ಲಿ ಯಾವುದೇ ಛಾಯಾಚಿತ್ರಗಳನ್ನು ತೆಗೆದಿಲ್ಲ ಎಂದರೆ ಸರಿಯಲ್ಲ. ಸ್ಥಳಕ್ಕೆ ಭೇಟಿ ನೀಡಿ ಯಾವುದೇ ಸ್ಥಳ ಮಹಜರ್ ಅನ್ನು ಜರುಗಿಸಿಲ್ಲ ಮತ್ತು ಸಾಕ್ಷಿದಾರರ ಹೇಳಿಕೆಗಳನ್ನು ಪಡೆದುಕೊಂಡಿಲ್ಲ ಎಂದರೆ ಸರಿಯಲ್ಲ. ಆರೋಪಿಗೂ ಈ ಪ್ರಕರಣಕ್ಕೂ ಯಾವುದೇ ಸಂಬಂಧ ಇಲ್ಲದಿದ್ದರೂ ಸಹ ನಮ್ಮ

ಮೇಲಾಧಿಕಾರಿಗಳ ಮಾತುಕೇಳಿಕೊಂಡು ಮತ್ತು ಮೃತ ಸಿದ್ದಲಿಂಗಯ್ಯರವರ ಕುಟುಂಬದವರಿಗೆ ಸಹಾಯ ಮಾಡುವ ಉದ್ದೇಶದಿಂದ ಸುಳ್ಳು ತನಿಖೆಯನ್ನು ನಡೆಸಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಮರುವಿಚಾರಣೆ ಇಲ್ಲ .

ಸಾ. ಹೇ. ತೆ. ನ್ಯಾ. ಬೆ. ಮಾಡಿಸಲಾಯಿತು.

ಓ. ಹೇ. ಕೇ. ಸ. ಇದೆ.

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ., ಹೊನ್ನಾಳಿ.